**O.S. 30/2021**

ಪ್ರಮಾಣೀಕರಿಸಲಾದ ದಿನಾಂಕಃ **31.07.2025.**
ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಎನ್ ಪಿ ಎಂ ವಕೀಲರಿಂದಃ

ನಾನು ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಸಲ್ಲಿಸಿದ ಮೇಲ್ಮನವಿ ತಿರಿಸ್ಕರಿಸಲಾಗಿದೆ ಎಂದರೆ ಸರಿ. ಈ ಆದೇಶ ಪ್ರಶ್ನಿಸಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿ. ದಿ. 17.06.2019 ರಂದು ನಾನು ಆ ಮೇಲ್ಮನವಿಯನ್ನು ಹಿಂಪಡೆದಿರುತ್ತೇನೆ ಎಂದರೆ ನೆನಪಿಲ್ಲ. ಈ ಕಂದಾಯ ನ್ಯಾಯಾಲಯಗಳನ್ನು ಹೊರತುಪಡಿಸಿ ನನ್ನ ಹೆಸರಗೆ ಖಾತೆ ಮಾಡಿಸಲು ಬೇರೆ ಯಾವ ಕಚೇರಿಯಲ್ಲಿ ಅರ್ಜಿ ಕೊಟ್ಟಿದ್ದರು ನೆನಪಿಲ್ಲ. 1996 ರಿಂದ 2019 ರವರೆಗೆ ಸರ್ವೆ ಮಾಡಿಸಿ ವಿಂಗಡಣೆ ಮಾಡಿಸಿರುತ್ತೇವೆ. ನನ್ನ ಹೆಸರಿಗೆ ದಾಖಲೆಯಾದ ನಂತರ ಸರ್ವೆ ಮಾಡಿಸಿರುತ್ತೇವೆ ನಿಖರವಾದ ದಿನಾಂಕ ನೆನಪಿಲ್ಲ. 2019 ರ ನಂತರ ಸರ್ವೆ ಮಾಡಿಸಿರುತ್ತೇವೆ ಎಂದರೆ ನೆನಪಿಲ್ಲ.

1996 ರಲ್ಲಿ ನನ್ನ ಹೆಸರಿಗೆ ಪತ್ರ ಮಾಡಿಸಿಕೊಳ್ಳುವಾಗ ವಿಕ್ರಯದಾರರ ಹೆಸರಿನಲ್ಲಿ ಜಮಾಬಂಧಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**
ಸಿವಿಲ್ ನ್ಯಾಯಾಧೀಶರು,ಪೊನ್ನಂಪೇಟೆ.